ತಿರಸ್ಕರಿಸಲಾಗಿತ್ತು. ಬಣ್ಣ ಹೆಚ್ಚು ಬರಲೆಂದು ಹಾಕಿದ ರಾಸಾಯನಿಕವೇ ಇದಕ್ಕೆ ಮಾರಕವಾಗಿತ್ತು. ಹಣ್ಣಿನ ಕವಚದಲ್ಲಿದ್ದ ಕಪ್ಪು ಚುಕ್ಕೆಗಳಿಂದಲೇ ಇದನ್ನು ಗ್ರಹಿಸಿದ ಅಧಿಕಾರಿಗಳು ಆರು ವರ್ಷಗಳ ಇವರ ಶ್ರಮವನ್ನ ಒಂದೇ ಏಟಿಗೆ ನೀರಲ್ಲಿ ಹೋಮವಾಗಿಸಿ ಬಿಟ್ಟಿದ್ದರು. ಅನಂತಯ್ಯ ಭೂಮಿಗಿಳಿದು ಹೋಗಿದ್ದ. ಕೃಷಿ ಇಲಾಖೆಯ ಅಧಿಕಾರಗಳನ್ನು ಕರೆಸಿ ಪರೀಕ್ಷೆಗೆ ಒಳಪಡಿಸಿದಾಗ, ಅದಕ್ಕೆ ತಗುಲಿದ ಯಾವುದೋ ವೈರಸ್ ಅಥವಾ ಗಾಳಿಯಿಂದ ತಗುಲಿದ ಸೋಂಕು ಒಂದರಿಂದ ಇನ್ನೊಂದು ಗಿಡಕ್ಕೆ ಹರಡಿ, ಇಡೀ ಬೆಳೆ, ಗಿಡಗಳು ರೋಗಗ್ರಸ್ತವಾಗಿ ನಾಶವಾಗಿದೆ ಎಂದು ತಿಳಿದು ಬಂದಿತ್ತು. ಅದಕ್ಕೆ ಔಷಧಿಯೂ ಇಲ್ಲವೆಂದು ಅವರು ಸ್ಪಷ್ಟಪಡಿಸಿದರು. ಸ್ವಂತ ಮಕ್ಕಳಂತೆ ಬೆಳೆಸಿದ ಗಿಡಗಳನ್ನು, ಎದೆಯ ಮೇಲೆ ಕಲ್ಲು ಹೊತ್ತುಕೊಂಡಂತೆ ನಿಷ್ಕಾರುಣ್ಯತೆಯಿಂದ ವಿಧಿ ಇಲ್ಲದೇ ಬುಡ ಸಮೇತ ಕಿತ್ತು ಹಾಕಲಾಗಿತ್ತು.

ಇದರಿಂದ ಅನಂತಯ್ಯ ದೊಡ್ಡ ಪಾಠ ಕಲಿತಿದ್ದ. ಒಂಟಿ ಬೆಳೆ ಪದ್ಧತಿಯನ್ನು ಅನುಸರಿಸಿದರೆ ಅಪಾಯ ಜಾಸ್ತಿಯೆಂದೂ ಮನಗಂಡು ಅದನ್ನೇ ಕಾರಗದ್ದೆಯ ಇತರ ಬೆಳೆಗಾರರಿಗೂ ಹೇಳಿದ್ದ. ಒಂದೇ ಎಕರೆ ಹೊಲವಿದ್ದರೂ, ಅದರಲ್ಲಿ ಕೃಷಿ, ತೋಟಗಾರಿಕೆ, ಅರಣ್ಯ ಕೃಷಿ ಮತ್ತು ಪಶುಸಂಗೋಪನೆ.. ಹೀಗೆ ಬಹುಬೆಳೆ ಪದ್ಧತಿ ಅನುಸರಿಸಿದರೆ, ತ್ರೈಮಾಸಿಕ ಆದಾಯವಾದರೆ ಲಾಭ ಲಭಿಸುತ್ತದೆ.

ಅನಂತಯ್ಯನ ಬಳಿ ದುಡಿದು, ಅನುಭವದ ಭಂಡಾರವನ್ನೇ ಹೊತ್ತು ಬಂದಿದ್ದ ಶಿವಣ್ಣ ಇಲ್ಲಿ ಅದನ್ನೇ ಅನುಸರಿಸಿದ್ದ. ಇಲ್ಲಿ ವರ್ಷಗಟ್ಟಲೇ ಕಾಯುವ ತಾಳ್ಮೆ ಖುದ್ದು ಆತನಿಗಾಗಲೀ, ಜಂಪಯ್ಯನಿಗಾಗಲೀ ಇರಲಿಲ್ಲ. ಶೀಘ್ರ ಫಲಕೊಡುವ ನಿಂಬೆ, ತರಕಾರಿಗಳು, ಹೂ ಗಿಡಗಳು ಹೀಗೆ ಬೆಳೆಸಿ ತಕ್ಕಮಟ್ಟಿನ ಆದಾಯ ಪಡೆಯುತ್ತಿದ್ದರು. ಇತರೆ ಗಿಡಗಳಾದ ಮಾವು, ನೆಲ್ಲಿಕಾಯಿ, ಸೀತಾಫಲ, ನೇರಳೆ ಬೆಳೆದು ಫಲ ಕೊಡಲು ಇನ್ನೂ ಸಮಯ ಇತ್ತು. ಅದರ ಆರೈಕೆಯೇ ದೊಡ್ಡ ಸವಾಲಾಗಿತ್ತು. ಸ್ವಂತ ದುಡಿಮೆ, ತಾಳ್ಮೆ ಬೇಡುತ್ತಿತ್ತು. ಗೊಬ್ಬರ ಇನ್ನಿತರ ಖರ್ಚುಗಳಿಗೆ ಸಾಲ ಮಾಡಬೇಕಿತ್ತು ಅಥವಾ ಕಾರಗದ್ದೆಯಲ್ಲಿ ಸಿಗುವ ಕೂಲಿ ಕೆಲಸವೇ ಮಾರ್ಗವಾಗಿತ್ತು. ದಿನ ಖರ್ಚು ಹೇಗೋ ಹೋಗುತ್ತಿತ್ತು. ಕಾರಗದ್ದೆಯ ಮಾರುಕಟ್ಟೆಗೆ ಇವರ ಕೃಷಿ ವಸ್ತುಗಳು ನೇರವಾಗಿ ಸಾಗಲ್ಪಡುತ್ತಿತ್ತು. ಸಂಜೆ ಅಲ್ಲಿಂದ ಕೂಲಿ ಮಾಡಿ ಹಿಂದಿರುಗುವವರು ಹಣ ಪಡೆದು ತಂದು ಕೊಡುತ್ತಿದ್ದರು.

ಇತ್ತ ರತ್ನಳಿಗೆ ವೀರಭದ್ರನ ಅಗಲಿಕೆಯ ನಂತರ ಕಮಲಿಯ ಜವಾಬ್ದಾರಿ ಒಂದು ಚಿಂತೆ ಆಗತೊಡಗಿತ್ತು.

'ಅವ್ನಂತೂ ಹೋದ .. ನಿನ್ನ ಗತಿ ಏನು ಕಮಲಿ..? ನಿನ್ನ ಭವಿಷ್ಯದ್ದೇ ಚಿಂತೆ ಆಗಿದೆ' ಎನ್ನಲು ಶುರು ಮಾಡಿದ್ದಳು.

'ನಮ್ದು ಚಿಂತೆ ಮಾಡೋದೇನಿದೆ ಅಕ್ಕಾ..? ನೀವು ಉಣ್ಣುವುದರಲ್ಲಿ ನನಗೆ ಎರಡು ತುತ್ತು ಹಾಕಿ ಬಿಡಿ.. ಇಲ್ಲೇ ಮೂಲೇಲಿ ಬಿದ್ದಿರ್ತೀನಿ.. ನನ್ನ ಮಾತ್ರ ಹೊರಗೆ ಹಾಕಬೇಡಿ.. ಅಷ್ಟೇ' ಎಂದು ಭಾರವಾದ ಮಾತುಗಳಲ್ಲಿ ನುಡಿದಳು ಕಮಲಿ ಒಮ್ಮೆ.

'ಛಿ..ಛಿ.. ಹೊರಗೆ ಹಾಕುವಷ್ಟು ಕಟುಕರೇನೇ ನಾವು..? ಹಾಗಿದ್ದಿದ್ರೆ ಒಳಗೆ ಸೇರಿಸಿಕೊಳ್ಳುತ್ತಿದ್ದವೇನು..? ಹಾಗಲ್ಲ ಕಮಲಿ.. ಮಗು ಚಿಕ್ಕದು.. ನಿನ್ನುದ್ದಕ್ಕೂ ಬದುಕಿದೆ.. ಒಂಟಿ ಜೀವನ ಹೇಗೆ ಬಾಳ್ತೀಯಾ ಅಂತ..?'

'ಈಗ ಅದು ಅಭ್ಯಾಸ ಆಗಿ ಹೋಗಿದೆ ಅಕ್ಕ.. ಬಿಡು.. ನೀವೆಲ್ಲಾ ನನ್ನ ಪಾಲಿಗೆ ಇದ್ದೀರಲ್ಲ ಅದೇ ಸಮಾಧಾನ.. ಪಾಂಡುದೇ ಚಿಂತೆ ಆಗಿತ್ತು ನನಗೆ.. ಅವ್ನೂ ಈಗ ಇಲ್ಲಿ ಹೊಂದಿಕೊಂಡಿದ್ದಾನೆ' ಎಂದು ಸಮಾಧಾನದ ನಿಟ್ಟುಸಿರಿಟ್ಟಳು.

'ನಮಗೆಲ್ಲರಿಗಿಂತ ಅವನು ಆ ಯೋಗೀನ್ನ ತುಂಬಾ ಹಚ್ಚಿಕೊಂಡಿದ್ದಾನೆ.. ಆತಂಗೂ ನಮ್ಮ ಪಾಂಡು ಮೇಲೆ ಭಾಳ ಪ್ರೀತಿ' ಎಂದವಳೇ ರತ್ನಳಿಗೆ ಏನೋ ಮಿಂಚು ಹೊಡೆದಂಥ ಯೋಚನೆ ಬಂದು ಮಾತು ನಿಲ್ಲಿಸಿದವಳು ದೀರ್ಘವಾಗಿ ಕಮಲಿಯ ಮುಖವನ್ನೇ ದಿಟ್ಟಿಸಿದಳು. ಯಾರಲ್ಲಿಯೂ ತನ್ನ ಮನದ ಇಂಗಿತ ಹೇಳಿಕೊಳ್ಳದೇ ಎದ್ದು ಹೊರಬಂದು ಜಂಪಯ್ಯನ ಮನೆಯತ್ತ ಹೆಜ್ಜೆ ಹಾಕಿದಳು. ಕಾಯ ಪಾಂಡುರಂಗನನ್ನು ಎತ್ತಿಕೊಂಡು ಹೊರಗೆ ಆಡಿಸಲು ಕರೆದೊಯ್ಯುತ್ತಿದ್ದ. ಅದೂ ಅನುಕೂಲವೇ ಆಯಿತು ಎಂದು ಮನದಲ್ಲೇ ಯೋಚಿಸುತ್ತ ಜಂಪಯ್ಯನ ಮನೆ ಹೊಸ್ತಿಲಲ್ಲಿ ನಿಂತು ಕರೆದಳು. ಜಂಪಯ್ಯ ಎಲೆ ಅಡಿಕೆ ಮೆಲ್ಲುತ್ತಾ ಹೊರ ಬಂದ.

'ಇಷ್ಟು ದಿನಕ್ಕೆ ಇವತ್ತು ನಿನ್ನ ಮುಖ ಕಂಡೆ ನೋಡು ರತ್ನಕ್ಕ.. ಬಂದದ್ದು ಖುಷಿಯಾಯಿತು.. ಬಾ ಕೂತ್ಕೊ..' ಎಂದು ಜಗುಲಿಯಲ್ಲೇ ಕುಳಿತ. ರತ್ನವ್ವ ಅಣತಿ ದೂರದಲ್ಲಿ ಕುಳಿತು, ಮಾತು ಹೇಗೆ ಆರಂಭಿಸುವುದೆಂದು ದ್ವಂದ್ವದಲ್ಲಿ ಬಿದ್ದಂತೆ ಕುಳಿತಾಗ ಜಂಪಯ್ಯನೇ ಕೆದಕಿದ.

'ನನ್ನ ಹತ್ರ ಮಾತನಾಡಲು ಯಾಕಿಷ್ಟು ಆಲೋಚನೆ.. ಮನಸ್ಸಲ್ಲಿ ಏನಿದೆ ಹೇಳಕ್ಕ.. ನಾನೇನೂ ತಪ್ಪು ತಿಳಿಯಲ್ಲ.. ನೀನು ನನ್ನ ತಂಗೀ ಥರ ಹೇಳವ್ವ..' ಎಂದ ಅವಳ ಮುಖಭಾವವನ್ನು ಅರಿತವನಂತೆ.

'ಅದೂ ಜಂಪಣ್ಣ.. ನಮಗೆಲ್ಲಾ ನೀನೇ ಹಿರಿಯವನಿದ್ದೀ.. ನಮಗೆ ಎಲ್ಲಾ ವಿಷಯದಲ್ಲಿ ದಾರಿ ತೋರಿಸುವವ ನೀನು.. ನನ್ನ ಮನಸ್ಸಲ್ಲಿ ಬಂದ ವಿಚಾರವನ್ನು ನೀನೇ ಕಾರ್ಯರೂಪಕ್ಕೆ ತರಬೇಕು ನೋಡು' ಎಂದಳು.

ಅವಳು ಯಾವ ಸಂಗತಿ ಮನಸಲ್ಲಿಟ್ಟುಕೊಂಡು ಮಾತನಾಡುತ್ತಿದ್ದಾಳೆಂದು ತಿಳಿಯದೇ ಜಂಪಯ್ಯ ಕಣ್ಣು ಕಿರಿದುಗೊಳಿಸಿ, ಕುತೂಹಲದಿಂದ ಕೇಳಿದ, 'ಯಾವ ವಿಚಾರ..? ವೀರಭದ್ರನ ಬಗೆಯಾ..?'

'ಅಲ್ಲಾ.. ಕಮಲಿ ಬಗ್ಗೆ..ನೀನೇ ನನಗೆ ದಾರಿ ತೋರಿಸಬೇಕು.. ಅವಳ ಲಗ್ನ ಮಾಡಬೇಕೂಂತ ಇದೀನಿ.. ನೀನೇನಂತೀಯ..?' ಜಂಪಯ್ಯ ಒಮ್ಮೆಗೇ ಕಕ್ಕಾಬಿಕ್ಕಿಯಾದ.

'ಕಮಲಿ ಲಗ್ನನಾ..?' ಹುಬ್ಬೇರಿಸಿ ಕೇಳಿದ ಜಂಪಯ್ಯ, ಕ್ಷಣ ತಡೆದು 'ಅದೇನೋ ಸರಿ.. ಆದರೆ ಹುಡುಗ ನೋಡಿದೀಯಾ..?'

'ಮನಸ್ಸಲ್ಲಿ ಇದೆ.. ಆದರೆ ಗೊಂದಲನೂ ಇದೆ.. ಸರಿಯಾ ತಪ್ಪಾ ತಿಳಿಯುತ್ತಿಲ್ಲ'

ಜಂಪಯ್ಯ ಕುತೂಹಲದಿಂದ ನೋಡಿದಂತೇ, ರತ್ನ ತನ್ನ ಮನದ ಯೋಚನೆ ಹೊರ ಹಾಕಿದಳು. 'ನಮ್ಮ ಯೋಗಿ.. ಕಾಯ'

ಜಂಪಯ್ಯನ ಮುಖವರಳಿತು. 'ಓಹ್.. ಭಾಳ ಒಳ್ಳೇ ಯೋಚನೆ ಮಾಡಿದ್ದೀ.. ರಂಗ ಹೇಗೂ ಕಾಯನ್ನ ತುಂಬಾ ಹಚ್ಕೊಂಡಿದ್ದಾನೆ.. ತನ್ನದೇ ಮಗು ಥರ ನೋಡ್ತಾನೆ.. ಕಮಲಿನೂ ಒಳ್ಳೇ ಹೆಣ್ಣು ಮಗಳು'

'ಹೌದು ಜಂಪಣ್ಣ.. ನೀನೇ ಕಾಯನ್ನ ಒಪ್ಪಿಸಿದರೆ.. ಇಬ್ಬರಿಗೂ ಜೊತೆ ಆಗುತ್ತೆ.. ನಮ್ಮ ಕಣ್ಮುಂದೇನೇ ಸಂಸಾರ ಮಾಡಿಕೊಂಡು ಇರ್ತಾರೆ.. ನೀನೇನಂತೀ..?'

ಜಂಪಯ್ಯ ತಲೆದೂಗಿ ರಾಯಭಾರ ನಡೆಸಲು ಒಪ್ಪಿಗೆ ಸೂಚಿಸಿದ. ಕತ್ತಲಾವರಿಸಿದ ಬಳಿಕ ಪಾಂಡು ಮನೆಗೆ ಹೋಗಲು ಕೇಳದೇ ಬೇಗನೇ ಉಂಡು ಕಾಯನ ಪಕ್ಕ ಜಗುಲಿಯಲ್ಲೇ ಮಲಗಿದಾಗ ಅವನ ತಲೆದಡವುತ್ತಾ ಕಾಯ ಮೈಮರೆತಿದ್ದಾಗ, ಜಂಪಯ್ಯ ಬಂದು ಅವನ ಪಕ್ಕ ಕುಳಿತ.

'ಇಬ್ಬರದ್ದೂ ಅಜ್ಜರಕಾಡು ಅಳಿದದ್ದು ಆಯ್ತಾ..?' ಕಾಯ ಜಂಪಯ್ಯನ ಮಾತಿಗೆ ಮುಗುಳ್ನಕ್ಕ.

'ಯಾವುದೋ ಜನ್ಮದ ಬಂಧ ಇರಬೇಕು.. ಈ ಮಗು ಯಾರೋ.. ನಾನು ಯಾರೋ.. ಇಲ್ಲಿ ಬಂದು ಹೀಗೆ ಸೇರಿಕೊಂಡಿದ್ದೇವೆ..'

'ಕೆಲವೆಲ್ಲಾ ಯಾವುದೂ ಪೂರ್ವ ನಿರ್ಧರಿತವಿರಲ್ಲ ಅಲ್ವಾ ಜಂಪಯ್ಯ.. ಇಲ್ಲಿ ಒಬ್ಬನೇ ಬಂದದ್ದು, ನನ್ನ ಹಿಂದೆ ನೀನು ಬಂದದ್ದು.. ನಂತರ ಇಲ್ಲಿ ನಾವೆಲ್ಲಾ ಒಂದು ಕುಟುಂಬವಾಗಿ ಎಂಟು ಮನೆಗಳು ಸೇರಿದ್ದು.. ನಮಗೆ ಈ ಜಾಗದ ಋಣ ಇತ್ತು.. ನಾವೆಲ್ಲ ಬಂಧುಗಳಂತೇ ಬೆಸೆಯಲು, ಯಾವುದೋ ಜನ್ಮದ ಋಣ ಬಾಕಿಯಿತ್ತು.. ಹಾಗೇ ಹೋದವರೂ ಕೂಡಾ ಈ ಭೂಮಿ ಋಣ ತೀರಿತೋ ಏನೋ.. ಹೋಗಿಬಿಟ್ಟರು.. ಒಟ್ಟಿನಲ್ಲಿ ಬದುಕು ಕೂಡಿ ಕಳೆವ ಆಟವಷ್ಟೇ..' ಕಾಯ ನುಡಿದಾಗ, ಜಂಪಯ್ಯನಿಗೆ ತನ್ನ ಮಾತಿಗೆ ಪೀಠಿಕೆ ಹಾಕಲು ಅವನ ಮಾತು ಸುಲಭವಾಯಿತೆಂದು ತೋರಿತು. ಹೊರಗೆ ಇಟ್ಟ ಚಿಮಣಿ ದೀಪ ಗಾಳಿಯೊಂದಿಗೆ ಗುದ್ದಾಡಿ ಸೋತು ಆರಿದಾಗ, ಜಂಪಯ್ಯ ಕಡ್ಡಿಪೆಟ್ಟಿಗೆಯಿಂದ ಕಡ್ಡಿ ಗೀರಿ ಹಚ್ಚಿದ.

'ಕತ್ತಲು ದುಃಖಕ್ಕೆ ಸಾಂತ್ವನ ನೀಡುತ್ತದೆ ಅಂತ ನಾವು ಅಂದುಕೊಳ್ತೇವೆ.. ಅದು ಕ್ರಮೇಣ ಅಭ್ಯಾಸವಾಗುತ್ತಾ ಏಕಾಂತ ಸುಖ ಅನಿಸ ತೊಡಗುತ್ತದೆ.. ಆದರೆ ಬೆಳಕಿನಲ್ಲಿ ತಾನೇ ನಾವು ಬದುಕಿನ ಸೌಂದರ್ಯ ನೋಡಲಿಕ್ಕಾಗುವುದು..? ಕತ್ತಲಲ್ಲಿ ನಮಗೆ ಕಾಣಿಸುವುದು ಒಳಗಿನ ಸೌಂದರ್ಯವಷ್ಟೇ'.

ಚಿಮಣಿ ತಂದು ಪಾಂಡುರಂಗನ ಮುಖದ ಮೇಲೆ ಬೆಳಕು ಬೀಳುವಂತೆ ಅಣತಿ ದೂರದಲ್ಲಿಟ್ಟ ಜಂಪಯ್ಯ. ಪಾಂಡುರಂಗನ ಮುಖದ ಮೇಲಿನ ಬೆಳಕು ಅವನ ಮುಗ್ಧ ಮುಖಭಾವವನ್ನು ಇನ್ನಷ್ಟು ಕಂಗೊಳಿಸುವಂತೆ ಮಾಡಿತು.

'ಈ ಮಗುವಿನ ಸಾಂಗತ್ಯದ ಸಂತೋಷದ